1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 62/2023
ದಿನಾಂಕ ಃ 23.06.2026  ರಂದು  ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 2 ಪಿ. ಡಬ್ಲ್ಯೂ:2

| | |
|---|---|
| ಸಾಕ್ಷಿದಾರರ ಹೆಸರು | ಪ್ರಸನ್ನ |
| ತಂದೆಯ  ಹೆಸರು | ಬಸವಯ್ಯ |
| ವಯಸ್ಸು | 38 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ದೊಡ್ಡ ಅಂಕನಹಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ  ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ.1 ನನ್ನ ತಾಯಿ.  ಚಾಸಾ.3 ಮತ್ತು 4 ನಮ್ಮ ಊರಿನವರು.  ಆಪಾದಿತ, ಸಾಗರ್ ನನ್ನ ಹೆಂಡತಿ ಸುಷ್ಮಾರವರ  ಅಣ್ಣ.
2. ನಮ್ಮ ಮದುವೆ ಆಗಿ ಸಮಾರು  15 ವರುಷ ಆಗಿದೆ.  ಅವಳು ಈಗ  ಆಕೆಯ ಅಪ್ಪನ ಮನೆಯಲ್ಲಿ ಇದ್ದಾಳೆ. 6 ರಿಂದ  7  ವರುಷಗಳಿಂದ  ಸುಷ್ಮಾ  ಅವರ ಅಪ್ಪನ ಮನೆಯಲ್ಲಿ ಇದ್ದಾಳೆ. ಗಂಡ ಹೆಂಡತಿ ಜಗಳ ಆಗಿ  ಅವಳು  ತವರು ಮನೆಗೆ ಹೋಗಿದ್ದಾಳೆ.  ನಾನು ಈಗ  ಒಬ್ಬನೇ ವಾಸ ಇದ್ದೇನೆ.  ನನ್ನ ತಾಯಿ ಪ್ರತ್ಯೇಕ ವಾಸ ಇದ್ದಾರೆ.  ನಮ್ಮ ಮನೆಯಿಂದ ಮತ್ತು ಅಂಗಡಿಯಿಂದ, ನನ್ನ ತಾಯಿಯ  ಮನೆ  ಮುಕ್ಕಾಲು ಕಿಮೀ  ದೂರ ಇದೆ.
3. ದಿಃ 05.12.2022 ರಂದು  ನಾನು  ಬೆಳಗ್ಗೆ 9 ರಿಂದ  9.30 ಗಂಟೆ ಸಮಯದಲ್ಲಿ ನನ್ನ ತಾಯಿ ಮನೆಗೆ, ಅಡಿಗೆ ಮಾಡಲು ಕಾಯಿ ತರಲು ಹೋಗಿದ್ದೆನು. ನಮ್ಮ ಅಮ್ಮ ಮನೆಯಲ್ಲಿ ಅಡಿಗೆ ಮಾಡುತ್ತಿದ್ದರು. ನಾನು ಕಾಯಿ ತೆಗೆದುಕೊಂಡು ನಮ್ಮ ಮನೆಗೆ,  ಗೌರಮ್ಮ ರವರ ಮನೆಯ ಮುಂದೆ  ನಡೆದುಕೊಂಡು ಹೋಗುತ್ತಿದ್ದಾಗ,  ಆಪಾದಿತನು ನನ್ನ ಮೇಲೆ ದಾಳಿ ಮಾಡಿ ಚಾಕುವಿನಿಂದ ಎದೆಗೆ 3 ಕಡೆ,  ಬಲ ತೋಳಿಗೆ ಒಂದು  ಕಡೆ, ಎಡ ತೋಳಿಗೆ ಒಂದು ಕಡೆ, ಎಡಗೈ ಯ ಅಂಗೈನ ಮೇಲೆ  3 ಕಡೆ,ಹೊಟ್ಟೆಗೆ  ಒಂದು ಕಡೆ ಚುಚ್ಚಿದ.  ನನ್ನ ತಂಗಿಯನ್ನು  ಹೊಡೆದು ತವರು ಮನೆಗೆ ಕಳುಹಿಸಿದ್ದೀಯಾ, ನಿನಗೆ ಬಾಳಿಸಲು ಯೋಗ್ಯತೆ ಇಲ್ಲ ಎಂದು  ಚುಚ್ಚಿದ.  ನನ್ನ ಮತ್ತು ಹೆಂಡತಿಯ ಮದ್ಯೆ ಮದ್ದೂರು ನ್ಯಾಯಾಲಯದಲ್ಲಿ ಕೇಸು ಆಗಿದೆ.  ನನ್ನ ಹೆಂಡತಿ ವರದಕ್ಷಿಣೆ ಕಿರುಕುಳ ಎಂದು  ಕೇಸು ಹಾಕಿದ್ದಳು ಮತ್ತು ಅವಳೇ ಈ  ಗಲಾಟೆಯ ನಂತರ ಕೇಸನ್ನು  ವಾಪಸ್ ತೆಗೆದುಕೊಂಡಿದ್ದಳು.  ನನ್ನ ತಂಗಿ ತವರು  ಮನೆಗೆ ಹೋದ ನಂತರ, ಆರೋಪಿಯು, ನನಗೆ ಬೈಯ್ಯುತ್ತಿದ್ದ, ತಂಗಿಯನ್ನು ಬಾಳಿಸಲು

ಆಗುವುದಿಲ್ಲ ನಿನಗೆ ಎಂದು ಬೈಯ್ಯುತ್ತಿದ್ದ ಮತ್ತು ನಮ್ಮ ಸಂಬಂಧ ಚೆನ್ನಾಗಿ ಇರಲಿಲ್ಲ. ನನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಸುತ್ತಿದ್ದನು.

4. ನನಗೆ ಚಾಕು ಹಾಕುವಾಗ, ನನ್ನ ತಾಯಿ ಬಂದರು, ಅವರು ಕೂಗಿಕೊಂಡಾಗ, ಆರೋಪಿಯು, ಅವರಿಗೆ ಕೂಡ ಬೆದರಿಸಿದ. ಆಗ ಚಾಸಾ. 3 ರವರು ಬಂದು ನನ್ನನ್ನು ಬಿಡಿಸಿದರು. ಅದೇ ಹೊತ್ತಿಗೆ ಚಾಸಾ. 4 ಮತ್ತು 5 ರವರು ಬಂದು ನನ್ನನ್ನು ಬಿಡಿಸಿದರು. ನಾನು ಒದ್ದಾಡುತ್ತಿದ್ದಾಗ ಆಂಬಲೆನ್ಸ್ ಗೆ ಫೋನ್ ಮಾಡಿದರು, ಆಂಬುಲೆನ್ಸ್ ಬರುವಾಗ ತಡವಾದ ಕಾರಣ ರವಿ ಎನ್ನುವವರ ಕಾರಿನಲ್ಲಿ ಚಾಸಾ.7 ರವರು ಎನ್ನುವವರು ನನ್ನನ್ನು ಮದ್ದೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ಅಲ್ಲಿ ಆಗುವುದಿಲ್ಲ ಎಂದಾಗ, ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಆಂಬಲೆನ್ಸ್ ನಲ್ಲಿ ಕರೆದುಕೊಂಡು ಹೋದರು, ಅಲ್ಲಿಯೂ ಆಗುವುದಿಲ್ಲ ಎಂದು ಹೇಳಿದಾಗ, ವಿಕ್ಟೋರಿಯ ಆಸ್ಪತ್ರೆಗೆ ಆಂಬಲೆನ್ಸ್‌ನಲ್ಲಿ ಕರೆದುಕೊಂಡು ಹೋದರು. ಅಲ್ಲಿ ನಾನು 15 ದಿವಸ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ನಾನು ವಿಕ್ಟೋರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದಾಗ ದಿಃ 09.12.2022 ರಂದು ಪೊಲೀಸರು ಬಂದಿದ್ದರು. ನನ್ನನ್ನು ವಿಚಾರಣೆ ಮಾಡಿದರು. ನನ್ನ ತಾಯಿ ದೂರು ನೀಡಿದ್ದಾರೆ ಎಂದು ಹೇಳಿದರು. ನನ್ನ ಹೇಳಿಕೆಯನ್ನು ಪಡೆದು ನನ್ನ ಸಹಿಯನ್ನು ಪಡೆದರು.

5. ಆರೋಪಿಯು ನನ್ನನ್ನು ಸಾಯಿಸುವ ಉದ್ದೇಶದಿಂದ ನನ್ನ ಮೇಲೆ ಚಾಕುವಿನಿಂದ ಹಲ್ಲೆ ಮಾಡಿದ್ದಾರೆ. ಆರೋಪಿಯು ನನ್ನ ಮೇಲೆ ಹಲ್ಲೆ ಮಾಡುವಾಗ ನಾನು ಬನಿಯನ್ ಧರಿಸಿದ್ದೆನು. ಸಾಕ್ಷಿಗೆ ಮುಮಾ.6 ಚಾಕುವನ್ನು ತೋರಿಸಿದಾಗ ಅದೇ ಚಾಕುವಿನಿಂದ ಆಪಾದಿತ ಹಲ್ಲೆ ಮಾಡಿದ್ದು ಎಂದು ಗುರುತಿಸಿರುತ್ತಾರೆ. ಅದೇ ರೀತಿ ಸಾಕ್ಷಿಗೆ ಮುಮಾ.5 ಬನಿಯನ್ ತೋರಿಸಿದಾಗ ಅದನ್ನು ಕೂಡ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ** ಆರೋಪಿ ಪರ ವಕೀಲರು ಗೈರು ಹಾಜರು, ಆಪಾದಿತನಿಗೆ ಪಾಟೀ ಸವಾಲು ಮಾಡಲು ಹೇಳಿದಾಗ, ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ ಆರೋಪಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಏನು ಇಲ್ಲ**
(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಯಾದವ ಕೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.